# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೌನ್ಸಿಲ್ ಕಾರ್ಯದರ್ಶಿಯವರ ಕಛೇರಿ, ಕೆಂಪೇಗೌಡ ಪೌರ ಸಭಾಂಗಣ, ನ.ರಾ.ವೃತ್ತ, ಬೆಂಗಳೂರು.

ಸಂಖ್ಯೆ:ಕೌಕಾ/ಸಿ1/ಸಭೆ/ಪಿ.ಆರ್/01/2020-21 ದಿನಾಂಕ: 13-04-2020

## ಸಭೆಯ ತಿಳುವಳಿಕೆ ಪತ್ರ

ವಿಷಯ: 2020-21ನೇ ಸಾಲಿನ ಕರಡು ಆಯವ್ಯಯ ಅಂದಾಜು ಪಟ್ಟಿಯ ಸಭೆ ಕರೆಯುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಸಂಖ್ಯೆ:ನಇ 19 ಎಂ ಎನ್ ವೈ 2020, ದಿನಾಂಕ:13-04-2020

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ(ಬಿ.ಬಿ.ಎಂ.ಪಿ)ರವರು ಪೂಜ್ಯ ಮಹಾಪೌರರು, ಉಪ ಮಹಾಪೌರರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು, ಆಯುಕ್ತರು ಮತ್ತು ಕೌನ್ಸಿಲ್‌ಕಾರ್ಯದರ್ಶಿಗಳು ಕೇಂದ್ರ ಕಛೇರಿಯಲ್ಲಿ ಉಪಸ್ಥಿತರಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಬಡ್ಜೆಟ್ ಮಂಡಿಸಲು ಅವಕಾಶ ಕಲ್ಪಿಸಿ, ಎಲ್ಲಾ 8 ವಲಯದಲ್ಲಿನ ಕಾರ್ಪೋರೇಟರ್‌ಗಳು ವಲಯ ಮಟ್ಟದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ಸೇರಿ, Video Conference ಮೂಲಕ ಕೇಂದ್ರ ಕಛೇರಿಯೊಂದಿಗೆ ಸಂವಹಿಸಿ ಚರ್ಚಿಸಿ ಕ್ರಮ ವಹಿಸಲು ನಿರ್ದೇಶಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019-20ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2020-21ನೇ ಸಾಲಿನ ಆಯವ್ಯಯ ಅಂದಾಜುಗಳ ಪಟ್ಟಿ ಮಂಡನೆ ಸಭೆಯು ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ , ಮಾನ್ಯ ಉಪ ಮಹಾಪೌರರು, ಆಡಳಿತ ಪಕ್ಷ/ವಿರೋಧಪಕ್ಷ ಮತ್ತು ಜೆಡಿ(ಎಸ್)ಪಕ್ಷದ ನಾಯಕರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು , ಉಳಿದ ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು ದಿನಾಂಕ:20-04-2020 ರಂದು ಸೋಮವಾರ ಬೆಳಗ್ಗೆ 12:00 ಘಂಟೆಗೆ ಕೆಂಪೇಗೌಡ ಪೌರ ಸಭಾಂಗಣ, ನರಸಿಂಹರಾಜ ಚೌಕ, ಬೆಂಗಳೂರು-02 ಇಲ್ಲಿ ಸಮಾವೇಶಗೊಳ್ಳುವುದು.

ವಲಯಗಳ ಎಲ್ಲಾ ಜಂಟಿ ಆಯುಕ್ತರು ತಮ್ಮ ವಲಯ ಮಟ್ಟದಲ್ಲಿಯೇ ಮೇಲ್ಕಂಡಂತೆ ತಮ್ಮ ವ್ಯಾಪ್ತಿಯಲ್ಲಿರುವ ಬೆಂಗಳೂರು ನಗರದ ಎಲ್ಲಾ ಮಾನ್ಯ ರಾಜ್ಯ ಸಭಾ ಸದಸ್ಯರು, ಮಾನ್ಯ ಲೋಕ ಸಭಾ ಸದಸ್ಯರು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ವಿಧಾನ ಸಭಾ ಸದಸ್ಯರುಗಳು, ಕಾರ್ಪೋರೇಟರ್‌ಗಳು ಹಾಗೂ ನಾಮ ನಿರ್ದೇಶಿತ ಸದಸ್ಯರು ತಮ್ಮ ವಲಯ ಮಟ್ಟದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ಸೇರಿ, Video Conference ಮೂಲಕ ಕೇಂದ್ರ ಕಛೇರಿಯೊಂದಿಗೆ ಸಂವಹಿಸಲು ಜಂಟಿ ಆಯುಕ್ತರವರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗಲು ಕೋರಿದೆ.

ಪೂಜ್ಯ ಮಹಾಪೌರರ ಮತ್ತು
ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ಕೌನ್ಸಿಲ್ ಕಾರ್ಯದರ್ಶಿ 13/4
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಶೇಷ ಸೂಚನೆ:**

- ಸಭೆಯ ದಿನದಂದು ಎಲ್ಲಾ ಮಾನ್ಯ ನಗರ ಪಾಲಿಕೆ ಸದಸ್ಯರುಗಳು ಪಾಲಿಕೆ ವತಿಯಿಂದ ನೀಡಲಾಗಿರುವ ಗುರುತಿನ ಚೀಟಿಯೊಂದಿಗೆ, ಸಭೆಗೆ ಹಾಜರಾಗಲು ಕೋರಿದೆ.

ಪು. ತಿ. ನೋ. . . . .

- ವಲಯ ಮಟ್ಟದಲ್ಲಿಯೇ ಜಂಟಿ ಆಯುಕ್ತರು ಹಾಜರಾತಿಯನ್ನು ತೆಗೆದುಕೊಂಡು ಈ ಕಛೇರಿಗೆ ವರದಿ ಸಲ್ಲಿಸುವುದು..
- ವಿಶೇಷ ಆಯುಕ್ತರು ಮಾಹಿತಿ ತಂತ್ರಜ್ಞಾನ ರವರು Video Conference ಗೆ ಅಗತ್ಯ ವ್ಯವಸ್ಥೆ ಮಾಡಲು ಹಾಗೂ ವೆಬ್ ಸ್ಟ್ರೀಮಿಂಗ್ ಮೂಖಾಂತರ ಪ್ರಸಾರವಾಗುವ ಕಾರ್ಯಕಲಾಪವನ್ನು ವೀಕ್ಷಿಸಲು ವಲಯ ಹಾಗೂ ಕೇಂದ್ರ ಕಛೇರಿಯಲ್ಲಿ ಮತ್ತು ರೆಕಾರ್ಡಿಂಗ್‌ಗೆ ವ್ಯವಸ್ಥೆ ಮಾಡಲು ಸೂಚಿಸಿದೆ.

**ಪ್ರತಿಯನ್ನು:**

- ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಈ ವಿಷಯವನ್ನು ಪೂಜ್ಯ ಮಹಾಪೌರರ ಗಮನಕ್ಕೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಈ ವಿಷಯವನ್ನು ಮಾನ್ಯ ಉಪ ಮಹಾಪೌರರ ಗಮನಕ್ಕೆ ತರಲು ಕೋರಿದೆ.
- ಬೆಂಗಳೂರು ನಗರದ ಎಲ್ಲಾ ಮಾನ್ಯ ರಾಜ್ಯ ಸಭಾ ಸದಸ್ಯರು, ಮಾನ್ಯ ಲೋಕ ಸಭಾ ಸದಸ್ಯರು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಆಡಳಿತ ಪಕ್ಷ ವಿರೋಧ ಪಕ್ಷದ ಮತ್ತು ಜೆ.ಡಿ (ಎಸ್) ಪಕ್ಷದ ನಾಯಕರುಗಳಿಗೆ ಕಳುಹಿಸಲಾಗಿದೆ.
- ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಲಾಗಿದೆ.
- ಮಹಾನಗರ ಪಾಲಿಕೆಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
- ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಈ ವಿಷಯವನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಲು ಕೋರಿದೆ.
- ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಹಣಕಾಸು) / ವಿಶೇಷ ಆಯುಕ್ತರು (ಕಲ್ಯಾಣ) / ವಿಶೇಷ ಆಯುಕ್ತರು (ಘನತ್ಯಾಜ್ಯ) / ಅಪರ ಆಯುಕ್ತರು (ಆಡಳಿತ) / ಅಪರ ಆಯುಕ್ತರು (ಆಸ್ತಿಗಳು) ರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
- ಪ್ರಧಾನ ಅಭಿಯಂತರರು ರವರಿಗೆ ಕಳುಹಿಸುತ್ತಾ, ಅಧಿಕಾರಿಗಳೊಂದಿಗೆ ಹಾಜರಾಗಲು ಕೋರಲಾಗಿದೆ.
- ಎಲ್ಲಾ ವಲಯ ಜಂಟಿ ಆಯುಕ್ತರು ರವರುಗಳಿಗೆ ಕಳುಹಿಸುತ್ತಾ, ಅಗತ್ಯ ಕ್ರಮ ವಹಿಸಲು ಕೋರಲಾಗಿದೆ
- ಅಪರ ನಿರ್ದೇಶಕರು (ನಗರ-ಯೋಜನೆ) ರವರುಗಳಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಜಂಟಿ ನಿರ್ದೇಶಕರು (ಪಶು ಸಂಗೋಪನೆ) / ಜಂಟಿ ನಿರ್ದೇಶಕರು (ಅಂಕಿ ಅಂಶ) ರವರುಗಳಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ
- ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಉಪ ಆಯುಕ್ತರು (ಆಡಳಿತ)/(ಮಾರುಕಟ್ಟೆ)/(ಆರೋಗ್ಯ)/(ಜಾಹೀರಾತು)/(ಕಲ್ಯಾಣ)/(ಆಸ್ತಿಗಳು)/(ಕಂದಾಯ)/(ಭೂ-ಸ್ವಾಧೀನ) ರವರುಗಳಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಆಯುಕ್ತರವರ ತಾಂತ್ರಿಕ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಮುಖ್ಯ ಆರೋಗ್ಯಾಧಿಕಾರಿ ರವರಿಗೆ / ಆರೋಗ್ಯ ವೈದ್ಯಾಧಿಕಾರಿಗಳು (ತಾಮಕುಕ), ದಾಸಪ್ಪ ಆಸ್ಪತ್ರೆ ರವರುಗಳಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, ಕಾನೂನು ಕೋಶದ ಮುಖ್ಯಸ್ಥರು ರವರುಗಳಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಕೋರಲಾಗಿದೆ.
- ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಗೆ ಕಳುಹಿಸುತ್ತಾ, ಸಭೆಗೆ ಹಾಜರಾಗಲು ಹಾಗೂ ಸೂಕ್ತ ವ್ಯವಸ್ಥೆ ಮಾಡಲು ಕೋರಿದೆ.
- ತೋಟಗಾರಿಕಾ ಅಧೀಕ್ಷಕರು ರವರಿಗೆ ಕಳುಹಿಸುತ್ತಾ, ಸಭೆಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಕಛೇರಿಗೆ ಸೂಕ್ತ ವ್ಯವಸ್ಥೆ ಮಾಡಲು ಕೋರಿದೆ.
- ಕಛೇರಿ ಕಡತಕ್ಕೆ.